# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 154 (186)
2. ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 08-12-2020
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮದಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ:<br>**ಎಡಿಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ)**<br>ಎಡಿಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ಅಡಿಯಲ್ಲಿ 24 ನಗರ / ಪಟ್ಟಣಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಕಳೆದ ಒಂದು ವರ್ಷದಿಂದ ಈ ಯೋಜನೆಯಡಿ ಮುಂದುವರೆದ 10 ಕಾಮಗಾರಿಗಳ ಜಿಲ್ಲಾವಾರು ವಿವರ ಅನುಬಂಧ -1 ರಲ್ಲಿ ನೀಡಲಾಗಿದೆ.<br>**ವಿಶ್ವಬ್ಯಾಂಕ್ ನೆರವಿನ – ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ – (ಕೆಯುಡಬ್ಲ್ಯುಎಸ್‌ಎಂಪಿ)**<br>ವಿಶ್ವಬ್ಯಾಂಕ್ ನೆರವಿನ - ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ - (ಕೆಯುಡಬ್ಲ್ಯುಎಸ್‌ಎಂಪಿ)ಯಲ್ಲಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ ಮತ್ತು ನಿರ್ವಹಣೆ-ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24/7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ॥ ಎಲ್&ಟಿ ಲಿಮಿಟೆಡ್, ಚೆನ್ನೈ ರವರಿಗೆ ಜೂನ್-2020 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ. ಕಾಮಗಾರಿಯ ಅನುಷ್ಠಾನ ಅವಧಿ ಐದು ವರ್ಷವಾಗಿದ್ದು, ನಂತರದ 7 ವರ್ಷಗಳ ಅವಧಿಯ ಕಾರ್ಯಾಚರಣೆ ಹಾಗೂ ನಿರ್ವಹಣೆ ಜವಾಬ್ದಾರಿಯನ್ನೂ Design-Build-Operate-Transfer (DBOT) ಗುತ್ತಿಗೆದಾರರು ನಿರ್ವಹಿಸಬೇಕಿರುತ್ತದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

| ಕ್ರ.ಸಂ | ಜಿಲ್ಲೆ/ನಗರ | ಗುತ್ತಿಗೆ ಮೊತ್ತ ರೂ. ಕೋಟಿಗಳಲ್ಲಿ |
|---|---|---|
| 1 | ಬೆಳಗಾವಿ | 837.43 |
| 2 | ಕಲಬುರಗಿ | 804.13 |
| 3 | ಹುಬ್ಬಳ್ಳಿ-ಧಾರವಾಡ | 1206.97 |
| | ಒಟ್ಟು | 2848.53 |

**ಸ್ಮಾರ್ಟ್ ಸಿಟಿ ಅಭಿಯಾನ**

ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮದಿಂದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಕೇಂದ್ರ ಸರ್ಕಾರದ ಪ್ರಾಯೋಜಿತ ಸ್ಮಾರ್ಟ್ ಸಿಟಿ ಅಭಿಯಾನ ಯೋಜನೆಯು ಒಂದಾಗಿರುತ್ತದೆ. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು ದಿನಾಂಕ 25.06.2015 ರಂದು ಸ್ಮಾರ್ಟ್ ಸಿಟಿ ಅಭಿಯಾನಕ್ಕೆ ಚಾಲನೆ ನೀಡಿದ್ದು, ಯೋಜನೆ ಅನುಷ್ಠಾನವನ್ನು 5 ಆರ್ಥಿಕ ವರ್ಷಗಳಿಗೆ ಕೈಗೊಳ್ಳಬೇಕಾಗಿರುತ್ತದೆ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸ್ಮಾರ್ಟ್ ಸಿಟಿ ಅಭಿಯಾನದಡಿ ರಾಜ್ಯದ 7 ಮಹಾನಗರಗಳು ಆಯ್ಕೆಯಾಗಿದ್ದು, ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ, ಮಾಹಿತಿ ಹಾಗೂ ಸಂಪರ್ಕ ತಂತ್ರಜ್ಞಾನ (ಐಸಿಟಿ) ಆಧಾರಿತ ಕ್ರಮಗಳಿಂದ ಸಾರ್ವಜನಿಕ ಸೇವೆಗಳನ್ನು ಉತ್ತಮ ಪಡಿಸುವುದು ಸೇರಿದಂತೆ ಹಲವಾರು ವಿನೂತನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ರಾಜ್ಯದಿಂದ ಈ ಕೆಳಕಂಡ 7 ನಗರಗಳು ಆಯ್ಕೆಯಾಗಿರುತ್ತವೆ;

1) ಬೆಳಗಾವಿ 2) ದಾವಣಗೆರೆ 3) ಹುಬ್ಬಳ್ಳಿ-ಧಾರವಾಡ 4) ಮಂಗಳೂರು 5) ಶಿವಮೊಗ್ಗ 6) ತುಮಕೂರು ಮತ್ತು 7) ಬೆಂಗಳೂರು.

**9 ಪಟ್ಟಣಗಳ ಯೋಜನೆ**

9 ಪಟ್ಟಣಗಳ ಯೋಜನೆ ಅಡಿಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಕಳೆದ ಒಂದು ವರ್ಷದಿಂದ ಈ ಯೋಜನೆಯಡಿ ಮುಂದುವರೆದ 9 ಕಾಮಗಾರಿಗಳ ಜಿಲ್ಲಾವಾರು ವಿವರ **ಅನುಬಂಧ-2** ರಲ್ಲಿ ನೀಡಲಾಗಿದೆ.

**ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆ.ಎಂ.ಆರ್.ಪಿ)**

ರಾಜ್ಯ ಸರ್ಕಾರದ ಅನುದಾನದಡಿ ಕೆ.ಎಂ.ಆರ್.ಪಿ ಯೋಜನೆಯಡಿ-(Support to KMRP) ತುಮಕೂರು ಜಿಲ್ಲೆಯ ತಿಪಟೂರು ನಗರಕ್ಕೆ ಹಂತರ-2 ರ ಒಳಚರಂಡಿ ಯೋಜನೆಯನ್ನು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ರೂ25.00 ಕೋಟಿ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ನಗರಕ್ಕೆ ನಿರಂತರ (24/7) ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲು ರೂ. 54 ಕೋಟಿ ಮೊತ್ತವನ್ನು ಸರ್ಕಾರದ ಆದೇಶದ ಸಂಖ್ಯೆ ಯುಡಿಡಿ 2011 ಪಿಆರ್‌ಜೆ 2015 ಬೆಂಗಳೂರು ದಿನಾಂಕ: 4.6.2016 ರ ಅನುಮೋದನೆ ನೀಡಿದ್ದು, 2019-20 ರಲ್ಲಿ ಈ ಯೋಜನೆಗಳು ಪ್ರಗತಿಯಲ್ಲಿವೆ, ಕಾಮಗಾರಿಗಳ ವಿವರ ಈ ಕೆಳಕಂಡಂತಿವೆ: |

| ಕ್ರ. ಸ. | ಜಿಲ್ಲಾ ಹೆಸರು | ಯೋಜನಾ ಪಟ್ಟಣ | ಕೈಗೊಂಡ ಕಾಮಗಾರಿ | ಪ್ರಸ್ತುತ/ಷರಾ |
|---|---|---|---|---|
| 1. | ತುಮಕೂರು | ತಿಪಟೂರು | ಹಂತ-2 ರ ಒಳಚರಂಡಿ ಯೋಜನೆ | ಸದರಿ ಕಾಮಗಾರಿಯನ್ನು ರೂ.2415 ಲಕ್ಷ ಮೊತ್ತಕ್ಕೆ ದಿನಾಂಕ:13.10.2017 ರಂದು ಗುತ್ತಿಗೆ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್-2020 ರ ಅಂತ್ಯಕ್ಕೆ ಮುಕ್ತಾಯ ಗೊಳಿಸಲಾಗುವುದು. |
| 2. | ಚಾಮರಾಜನಗರ | ಕೊಳ್ಳೇಗಾಲ | ನಿರಂತರ ನೀರು ಸರಬರಾಜು | ಯೋಜನೆಗೆ ರೂ.65.96 ಕೋಟಿ (ಸ್ಥಳೀಯ ಸಂಸ್ಥೆಯ ಮೂಲಕ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ ಸೇರಿ) ಮೊತ್ತಕ್ಕೆ ದಿನಾಂಕ: 25.4.2019 ರಂದು ಗುತ್ತಿಗೆ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ದಿನಾಂಕ: 31.10.2021 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. |

<u>**ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ)**</u>

ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ) ಜಲಸಿರಿ ಯೋಜನೆಯಡಿ ಕಳೆದ ಒಂದು ವರ್ಷದಲ್ಲಿ (2019-20ರಲ್ಲಿ) ಕೈಗೊಳ್ಳಲಾದ ಜಿಲ್ಲಾವಾರು ಅಭಿವೃದ್ಧಿ ಕಾರ್ಯಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | (see table below) |

| ಕ್ರ. ಸಂ | ಜಿಲ್ಲೆ | ಕಾಮಗಾರಿಗಳು |
|---|---|---|
| 1 | ಉಡುಪಿ | ಸಗಟು ನೀರು ಸರಬರಾಜು |
| 2 | ಮಂಗಳೂರು | 1) 24/7 ನೀರು ಸರಬರಾಜು |
| | | 2) ಮಂಗಳೂರು ನಗರದ ವಲಯ 3 & 5 ರಲ್ಲಿ ಪ್ರಸ್ತುತ ವಿರುವ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಮಗಾರಿ. |
| | | 3) ಮಂಗಳೂರು ನಗರದ ವಲಯ 9, 12 & 13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ 5 ವರ್ಷಗಳಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ ದೊರೆತ ಅನುದಾನವೆಷ್ಟು ಸದರಿ ಮೊತ್ತವನ್ನು ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ ದೊರೆತ ಅನುದಾನವನ್ನು ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲಾಗಿದೆ: |

<u>ಎಡಿಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್ಐಪಿ)</u>

ಕಳೆದ 5 ವರ್ಷಗಳಲ್ಲಿ ಎಡಿಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್ಐಪಿ) ಸರ್ಕಾರದಿಂದ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನಗಳ ವಿವರ ಈ ಕೆಳಕಂಡಂತಿದೆ;

ರೂ. ಕೋಟಿಗಳಲ್ಲಿ

| ಕ್ರ. ಸಂ | ಆರ್ಥಿಕ ವರ್ಷ | ಬಿಡುಗಡೆಯಾದ ಅನುದಾನ | ಅನುದಾನದ ವೆಚ್ಚ |
|---|---|---|---|
| 1 | 2015-16 | 330.00 | 337.57 |
| 2 | 2016-17 | 375.00 | 421.46 |
| 3 | 2017-18 | 376.48 | 269.04 |
| 4 | 2018-19 | - | 183.08 |
| 5 | 2019-20 | - | 120.02 |

<u>ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆಗೆ (ಕೆಯುಡಬ್ಲ್ಯುಎಸ್‌ಎಂಪಿ)</u>

ಕಳೆದ 5 ವರ್ಷಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆಗೆ (ಕೆಯುಡಬ್ಲ್ಯುಎಸ್‌ಎಂಪಿ) ಸರ್ಕಾರದಿಂದ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನಗಳ ವಿವರ ಈ ಕೆಳಕಂಡಂತಿದೆ;

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|

ರೂ. ಕೋಟಿಗಳಲ್ಲಿ

| ಕ್ರ. ಸಂ | ಆರ್ಥಿಕ ವರ್ಷ | ಬಿಡುಗಡೆಯಾದ ಅನುದಾನ | ಅನುದಾನದ ವೆಚ್ಚ |
|---|---|---|---|
| 1 | 2015-16 | 1.50 | 2.69 |
| 2 | 2016-17 | - | 1.62 |
| 3 | 2017-18 | 29.50 | 20.86 |
| 4 | 2018-19 | 33.60 | 6.90 |
| 5 | 2019-20 | 13.18 | 5.48 |

<u>ಸ್ಮಾರ್ಟ್ ಸಿಟಿ ಅಭಿಯಾನ</u>

ಸ್ಮಾರ್ಟ್ ಸಿಟಿ ಅಭಿಯಾನದಡಿ 5 ವರ್ಷಗಳ ಅವಧಿಯಲ್ಲಿ ಪ್ರತಿನಗರಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ತಲಾ ರೂ.500 ಕೋಟಿಗಳ ಅನುದಾನ ನಿಗದಿಯಾಗಿದೆ.

ರಾಜ್ಯದ 7 ನಗರಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರ ಕೆಳಗಿನಂತಿದೆ

(ರೂ. ಕೋಟಿಗಳಲ್ಲಿ)

| ಕ್ರ.ಸಂ | ನಗರಗಳು | ಬಿಡುಗಡೆಯಾದ ಮೊತ್ತ | | | ವೆಚ್ಚ |
|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | |
| 1. | ಬೆಳಗಾವಿ | 294 | 200 | 494 | 340.42 |
| 2. | ದಾವಣಗೆರೆ | 196 | 200 | 396 | 246.74 |
| 3. | ಹುಬ್ಬಳ್ಳಿ-ಧಾರವಾಡ | 196 | 190 | 386 | 159.11 |
| 4. | ಮಂಗಳೂರು | 190 | 148 | 338 | 157.33 |
| 5. | ಶಿವಮೊಗ್ಗ | 196 | 111 | 307 | 187.53 |
| 6. | ತುಮಕೂರು | 294 | 111 | 405 | 299.06 |
| 7. | ಬೆಂಗಳೂರು. | 155 | 55 | 210 | 89.40 |
| | ಒಟ್ಟು | 1521 | 1015 | 2356 | 1479.59 |

<u>9 ಪಟ್ಟಣಗಳ ಯೋಜನೆ</u>

ಕಳೆದ 5 ವರ್ಷಗಳಲ್ಲಿ 9 ಪಟ್ಟಣಗಳ ಯೋಜನೆಯಡಿ ಸರ್ಕಾರದಿಂದ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನಗಳ ವಿವರ ಈ ಕೆಳಕಂಡಂತಿದೆ;

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಆರ್ಥಿಕ ವರ್ಷ | ಬಿಡುಗಡೆಯಾದ ಅನುದಾನ | ಅನುದಾನದ ವೆಚ್ಚ |
|---|---|---|---|
| 1 | 2015-16 | - | - |
| 2 | 2016-17 | - | - |
| 3 | 2017-18 | 10.00 | 2.47 |
| 4 | 2018-19 | 18.75 | 26.82 |
| 5 | 2019-20 | 60.22 | 26.50 |
| | Total | 88.97 | 55.79 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|

<u>ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆ.ಎಂ.ಆರ್.ಪಿ)</u>

ಕೆಎಂಆರ್‌ಪಿಯ ಮುಂದುವರೆದ ಯೋಜನೆಯಡಿ - ರಾಜ್ಯ ಸರ್ಕಾರದ ಹೆಚ್ಚುವರಿ ಬೆಂಬಲ ಹೂಡಿಕೆ ಯೋಜನೆಯಡಿ ತಿಪಟೂರು ನಗರದಲ್ಲಿ ಹಂತ-2 ರ ಒಳಚರಂಡಿ ಕಾಮಗಾರಿ ಹಾಗೂ ಕೊಳ್ಳೇಗಾಲ ನಗರದಲ್ಲಿ ನಿರಂತರ ನೀರು ಸರಬರಾಜು ಯೋಜನೆಗಳಿಗೆ ಕಳೆದ 5 ವರ್ಷಗಳ ಅವಧಿಯಲ್ಲಿ ಬಿಡುಗಡೆ ಮಾಡಿದ ಅನುದಾನ ಹಾಗೂ ವೆಚ್ಚದ ವಿವರಗಳು ಈ ಕೆಳಕಂಡಂತಿವೆ:

(ರೂ.ಕೋಟಿಗಳಲ್ಲಿ)

| ವರ್ಷ | ದೊರೆತ ಅನುದಾನ | ವೆಚ್ಚ | | ಒಟ್ಟು | ಜಿಲ್ಲೆಯ ಹೆಸರು | ಯೋಜನಾ ನಗರಗಳು | ಕಾಮಗಾರಿ ವಿವರ |
|---|---|---|---|---|---|---|---|
| | | ತಿಪಟೂರು | ಕೊಳ್ಳೇಗಾಲ | | | | |
| 2015-16 | ಕಾಮಗಾರಿಯು ಪ್ರಾರಂಭಗೊಂಡಿಲ್ಲ | | | | | | |
| 2016-17 | 5.00 | 0.00 | 0.00 | | ತುಮಕೂರು | ತಿಪಟೂರು | ಹಂತ-2 ರ ಒಳಚರಂಡಿ ಯೋಜನೆ |
| 2017-18 | 5.00 | 5.12 | 0.00 | 5.12 | ಚಾಮರಾಜನಗರ | ಕೊಳ್ಳೇಗಾಲ | ನಿರಂತರ ನೀರು ಸರಬರಾಜು |
| 2018-19 | 7.50 | 7.40 | 0.77 | 8.17 | | | |
| 2019-20 | 18.75 | 5.32 | 10.87 | 16.19 | | | |

<u>ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ)</u>

ಕಳೆದ 5 ವರ್ಷಗಳಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ) ಜಲಸಿರಿ ಯೋಜನೆಗೆ ಸರ್ಕಾರದಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲಾಗಿದೆ ಎಂಬ ಬಗ್ಗೆ ಜಿಲ್ಲಾವಾರು ವಿವರಗಳನ್ನು **ಅನುಬಂಧ-3** ದಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: ನಅಇ 254 ಪಿ.ಆರ್.ಜೆ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

ಅನುಬಂಧ - 1

ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ" ದಡಿ ಮುಂದುವರೆದ ಕಾಮಗಾರಿಗಳ ವಿವರ.

| ಕ್ರ. ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಕಾಮಗಾರಿ ಹೆಸರು | ಷರಾ |
|---|---|---|---|---|
| 1 | ಗದಗ | ಗದಗ-ಬೆಟಗೇರಿ | 24x7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಜಿಡಿಜಿ01) | ಕಾಮಗಾರಿ ಪ್ರಗತಿಯಲ್ಲಿದೆ. |
| 2 | ಹಾವೇರಿ | ಹಾವೇರಿ | 24x7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಹೆಚ್‌ವಿಆರ್01) | ಕಾಮಗಾರಿ ಪ್ರಗತಿಯಲ್ಲಿದೆ. |
| 3 | ಬಾಗಲಕೋಟೆ | ರಬಕವಿ-ಬನಹಟ್ಟಿ | ಒಳಚರಂಡಿ ಜಾಲ ಮತ್ತು ಎಫ್.ಎ.ಎಲ್ ಮಾದರಿಯ 9.2 ಎಂ.ಎಲ್.ಡಿ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಆರ್‌ಬಿಕೆ02). | ಕಾಮಗಾರಿ ಪೂರ್ಣಗೊಂಡಿದೆ. ಎಸ್‌ಟಿಪಿ ಪ್ರಾಯೋಗಿಸಲಾಗುತ್ತಿದೆ |
| 4 | ಯಾದಗೀರ್ | ಯಾದಗೀರ್ | 24x7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ವೈಜಿಆರ್01). | ಕಾಮಗಾರಿ ಪೂರ್ಣಗೊಂಡು ಪ್ರಾಯೋಗಿಕ ಹಂತದಲ್ಲಿದೆ. |
| 5 | ಬಳ್ಳಾರಿ | ಬಳ್ಳಾರಿ | 24x7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಬಿಎಲ್‌ವೈ01). | ಕಾಮಗಾರಿ ಪ್ರಗತಿಯಲ್ಲಿದೆ |
| 6 | | ಹೊಸಪೇಟೆ | 24x7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಹೆಚ್‌ಪಿಟಿ01) | ಕಾಮಗಾರಿ ಪ್ರಗತಿಯಲ್ಲಿದೆ |
| 7 | | ಹೊಸಪೇಟೆ | ಒಳಚರಂಡಿ ವ್ಯವಸ್ಥೆ (ಪ್ಯಾಕೇಜು-01ಹೆಚ್‌ಪಿಟಿ02ಸಿ). | ಕಾಮಗಾರಿ ಪ್ರಗತಿಯಲ್ಲಿದೆ. |
| 8 | ರಾಯಚೂರು | ರಾಯಚೂರು | 24x7 ನಿರಂತರ ನೀರು ಸರಬರಾಜು ಕಾಮಗಾರಿ (ಪ್ಯಾಕೇಜು-04ಆರ್‌ಸಿಆರ್01) | ಕಾಮಗಾರಿ ಪ್ರಗತಿಯಲ್ಲಿದೆ |
| 9 | | ಸಿಂಧನೂರು | 24x7 ನಿರಂತರ ನೀರು ಸರಬರಾಜು ಕಾಮಗಾರಿ (04ಎಸ್‌ಎನ್‌ಡಿ01) | ಕಾಮಗಾರಿ ಪ್ರಗತಿಯಲ್ಲಿದೆ |
| 10 | | ಸಿಂಧನೂರು | ಒಳಚರಂಡಿ ವ್ಯವಸ್ಥೆ ಹಾಗೂ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-03ಎಸ್‌ಎನ್‌ಡಿ02). | ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. |

ವ್ಯವಸ್ಥಾಪಕ ನಿರ್ದೇಶಕರು

ಕೆಯುಐಡಿಎಫ್‌ಸಿ

# ಕರ್ನಾಟಕದ 9 ಪಟ್ಟಣಗಳಲ್ಲಿ ನೀರು ಸರಬರಾಜು ಯೋಜನೆಯ ಮಾಹಿತಿ

| ಕ್ರ. ಸಂ. | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಪುರಸಭೆ / ನಗರ ಸಭೆ | ಷರಾ |
|---|---|---|---|---|
| 1 | ಗದಗ | ಮುಂಡರಗಿ | ಪುರಸಭೆ | ಕಾಮಗಾರಿ ಪ್ರಗತಿಯಲ್ಲಿದೆ. |
| 2 | ಬಳ್ಳಾರಿ | ತೆಕ್ಕಲಕೋಟೆ | ಪಟ್ಟಣ ಪಂಚಾಯತಿ | |
| 3 | ಬಳ್ಳಾರಿ | ಕೊಟ್ಟುರು | ಪಟ್ಟಣ ಪಂಚಾಯತಿ | |
| 4 | ಬಾಗಲಕೋಟೆ | ಮಹಾಲಿಂಗಪುರ | ಪುರಸಭೆ | |
| 5 | ಬಾಗಲಕೋಟೆ | ತೆರೆದಾಳ | ಪುರಸಭೆ | |
| 6 | ರಾಯಚೂರು | ಮುದಗಲ್ | ಪುರಸಭೆ | |
| 7 | ದಕ್ಷಿಣ ಕನ್ನಡ | ಮುಲ್ಕಿ | ಪಟ್ಟಣ ಪಂಚಾಯತಿ | |
| 8 | ಬಳ್ಳಾರಿ | ಕಂಪ್ಲಿ | ಪುರಸಭೆ | |
| 9 | ಮಂಡ್ಯ | ಕೆ.ಆರ್.ಪೇಟೆ | ಪುರಸಭೆ | |

[signature] 9/01/18

ವ್ಯವಸ್ಥಾಪಕ ನಿರ್ದೇಶಕರು
ಕೆಯುಐಡಿಎಫ್‌ಸಿ

ಅನುಬಂಧ-3

## ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ಯೋಜನೆ ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆಐಯುಡಬ್ಲ್ಯೂಎಂಐಪಿ)

ರೂ ಕೋಟಿಗಳಲ್ಲಿ

| ವರ್ಷ | ದೊರೆತ ಅನುದಾನ | ಜಿಲ್ಲೆ | ನಗರ | ಕಾಮಗಾರಿಯ ವಿವರ | ವೆಚ್ಚ |
|---|---|---|---|---|---|
| 2015-16 | 37.50 | ದಾವಣಗೆರೆ | ದಾವಣಗೆರೆ | ಒಳಚರಂಡಿ ಕಾಮಗಾರಿ, ತಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 16.05 |
| | | | ಹರಿಹರ | ಒಳಚರಂಡಿ ಕಾಮಗಾರಿ, ತಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 9.94 |
| | | ಒಟ್ಟು | | | **25.99** |
| | | ಹಾವೇರಿ | ಬ್ಯಾಡಗಿ | ಒಳಚರಂಡಿ ಕಾಮಗಾರಿ, ನೀರು ಶುದ್ಧೀಕರಣ ಘಟಕ ನಿರ್ಮಾಣ | 5.93 |
| | | | ರಾಣಿಬೆನ್ನೂರು | | |
| | | ಒಟ್ಟು | | | 5.93 |
| 2016-17 | 50.00 | ದಾವಣಗೆರೆ | ದಾವಣಗೆರೆ | ಒಳಚರಂಡಿ ಕಾಮಗಾರಿ, ತಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 27.64 |
| | | | ಹರಿಹರ | ಒಳಚರಂಡಿ ಕಾಮಗಾರಿ, ನೀರು ಶುದ್ಧೀಕರಣ ಘಟಕ ನಿರ್ಮಾಣ | 14.27 |
| | | **ಒಟ್ಟು** | | | **41.91** |
| | | ಹಾವೇರಿ | ಬ್ಯಾಡಗಿ | ಒಳಚರಂಡಿ ಕಾಮಗಾರಿ, ತಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 10.97 |
| | | | ರಾಣಿಬೆನ್ನೂರು | | |
| | | ಒಟ್ಟು | | | 10.97 |
| 2017-18 | 120.00 | ದಾವಣಗೆರೆ | ದಾವಣಗೆರೆ | ನೀರು ಸರಬರಾಜು ಕಾಮಗಾರಿ, ಒಳಚರಂಡಿ ಕಾಮಗಾರಿ, ತಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 82.99 |
| | | | ಹರಿಹರ | ಒಳಚರಂಡಿ ಕಾಮಗಾರಿ, ತಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 29.55 |
| | | | ಒಟ್ಟು | | 112.54 |
| | | ಹಾವೇರಿ | ಬ್ಯಾಡಗಿ | ಒಳಚರಂಡಿ ಕಾಮಗಾರಿ, ನೀರು ಶುದ್ಧೀಕರಣ ಘಟಕ ನಿರ್ಮಾಣ | 17.10 |
| | | | ರಾಣಿಬೆನ್ನೂರು | | |
| | | ಒಟ್ಟು | | | 17.10 |
| 2018-19 | 275.00 | ದಾವಣಗೆರೆ | ದಾವಣಗೆರೆ | ನೀರು ಸರಬರಾಜು ಕಾಮಗಾರಿ, ತಾಜ್ಯ ಒಳಚರಂಡಿ ಕಾಮಗಾರಿ, ತಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 138.01 |

| | | | | | |
|---|---|---|---|---|---|
| | | | ಹರಿಹರ | ನೀರು ಸರಬರಾಜು ಕಾಮಗಾರಿ, ಒಳಚರಂಡಿ ಕಾಮಗಾರಿ, ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 43.68 |
| | | | | ಒಟ್ಟು | **181.69** |
| | | ಹಾವೇರಿ | ಬ್ಯಾಡಗಿ | ನೀರು ಸರಬರಾಜು ಕಾಮಗಾರಿ, ಒಳಚರಂಡಿ ಕಾಮಗಾರಿ, ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 27.06 |
| | | | ರಾಣಿಬೆನ್ನೂರು | | |
| | | | | ಒಟ್ಟು | **27.06** |
| | | ದಕ್ಷಿಣ ಕನ್ನಡ | ಮಂಗಳೂರು | ಒಳಚರಂಡಿ ಕಾಮಗಾರಿ | 36.10 |
| | | | ಪುತ್ತೂರು | ನೀರು ಸರಬರಾಜು ಕಾಮಗಾರಿ, | 7.63 |
| | | | | ಒಟ್ಟು | **43.73** |
| | | ಉಡುಪಿ | ಉಡುಪಿ | ನೀರು ಸರಬರಾಜು ಕಾಮಗಾರಿ, | 10.29 |
| | | | ಕುಂದಾಪುರ | ನೀರು ಸರಬರಾಜು ಕಾಮಗಾರಿ, | 7.71 |
| | | | | ಒಟ್ಟು | **18.00** |
| 2019-20 | 306.41 | ದಾವಣಗೆರೆ | ದಾವಣಗೆರೆ | ನೀರು ಸರಬರಾಜು ಕಾಮಗಾರಿ, ಒಳಚರಂಡಿ ಕಾಮಗಾರಿ, ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 133.71 |
| | | | ಹರಿಹರ | ನೀರು ಸರಬರಾಜು ಕಾಮಗಾರಿ, ಒಳಚರಂಡಿ ಕಾಮಗಾರಿ, ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ | 25.32 |
| | | | | ಒಟ್ಟು | **159.03** |
| | | ಹಾವೇರಿ | ಬ್ಯಾಡಗಿ | ನೀರು ಸರಬರಾಜು ಕಾಮಗಾರಿ, ಒಳಚರಂಡಿ ಕಾಮಗಾರಿ, | 16.18 |
| | | | ರಾಣಿಬೆನ್ನೂರು | | |
| | | | | ಒಟ್ಟು | 16.18 |
| | | ದಕ್ಷಿಣ ಕನ್ನಡ | ಮಂಗಳೂರು | ಒಳಚರಂಡಿ ಕಾಮಗಾರಿ, ನೀರು ಸರಬರಾಜು ಕಾಮಗಾರಿ, | 77.79 |
| | | | ಪುತ್ತೂರು | ನೀರು ಸರಬರಾಜು ಕಾಮಗಾರಿ, | 13.40 |
| | | | | | 91.19 |
| | | ಉಡುಪಿ | ಉಡುಪಿ | ನೀರು ಸರಬರಾಜು ಕಾಮಗಾರಿ | 14.28 |
| | | | ಕುಂದಾಪುರ | ನೀರು ಸರಬರಾಜು ಕಾಮಗಾರಿ | 5.72 |
| | | | | ಒಟ್ಟು | 20.00 |

ವ್ಯವಸ್ಥಾಪಕ ನಿರ್ದೇಶಕರು
ಕೆಯುಐಡಿಎಫ್‌ಸಿ